ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾನ್ಯ ಮಂತ್ರಿಗಳೇ ಹೇಳಿ ಬಿಡಿ, ತಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಹೇಳಿದ್ದಾರಲ್ಲ, ತಾವು ದಯವಿಟ್ಟು ಕುಳಿತುಕೊಳ್ಳಿ, ಈಗ ನಾಡಗೌಡರವರೇ ಪ್ರಶ್ನೆ ಕೇಳಿ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, ಅವರು ಹೇಳುತ್ತಾರೆ. ಕೈಮುಗಿದು ಕೇಳುತ್ತೇನೆ.

ಅಧ್ಯಕ್ಷರು : ಸರಿ ಮಾಡುತ್ತೇನೆಂದು, ಪರಿಶೀಲಿಸುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಅವರು ಬೇರೆಯವರಿಗೆ ಮಾರಿ ಈ ರೀತಿ ಬಿಸಿನೆಸ್ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ಎಲ್ಲಾ detail ಗೊತ್ತು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಬೇಲೂರು dam ಬಗ್ಗೆ.. . . .

ಅಧ್ಯಕ್ಷರು : ಅವರು ಕೇಳಿದ ಪ್ರಶ್ನೆ ಬೇರೆ. ತಾವು ಬೇಲೂರಿಗೆ ಸಂಬಂಧಪಟ್ಟಂತೆ sudden ಆಗಿ ಕೇಳಿದರೆ ಉತ್ತರ ಎಲ್ಲಿರುತ್ತದೆ? ತಾವು ಕುಳಿತುಕೊಳ್ಳಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಸಮಸ್ಯೆ ಬಗೆಹರಿಯದಿದ್ದರೆ ಏನು ಮಾಡುವುದು?

ಅಧ್ಯಕ್ಷರು : ಏನು ಮಾಡುವುದು ಎಂದರೆ ತಾವು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು ಸ್ಥಗಿತಗೊಂಡಿರುವುದು

63 (413) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷದಿಂದ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಾಮಗಾರಿಗಳು ಸ್ಥಗಿತಗೊಳ್ಳಲು ಕಾರಣಗಳೇನು;

ಇ) ಕಳೆದ ಮೂರು ವರ್ಷಗಳಲ್ಲಿ ವಿಜಾಪೂರ ಜಿಲ್ಲೆಯಲ್ಲಿ ಲೊಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ರಸ್ತೆಗಳ ಕಾಮಗಾರಿಗಳು ಎಷ್ಟು; (ಸಂಪೂರ್ಣ ವಿವರವನ್ನು ನೀಡುವುದು)

ಈ) ಕಳೆದ ಮೂರು ವರ್ಷಗಳಲ್ಲಿ ಮುದ್ದೇಬಿಹಾಳ ಕ್ಷೇತ್ರವ್ಯಾಪ್ತಿಯ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸುವುದು? (ಸಂಪೂರ್ಣ ವಿವರ ನೀಡುವುದು)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಕಳೆದ ಮೂರು ವರ್ಷಗಳಲ್ಲಿ ವಿಜಾಪೂರ ಜಿಲ್ಲೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಈ) ಭಾಗಶಃ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಉ) ಕಳೆದ 3 ವರ್ಷಗಳಲ್ಲಿ ಮುದ್ದೇಬಿಹಾಳ ಮತಕ್ಷೇತ್ರದಲ್ಲಿಯ ರಸ್ತೆಗಳು ಹಾಳಾಗದಂತೆ ವಿವಿಧ ಯೋಜನೆಗಳ ಅಡಿಯಲ್ಲಿ ರಸ್ತೆಗಳ ಸುಧಾರಣೆಯನ್ನು ಕೈಗೊಳ್ಳಲಾಗಿದೆ. ಕಳೆದ 3 ವರ್ಷಗಳಲ್ಲಿ ಆಯಾ ವರ್ಷಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಮುದ್ದೇಬಿಹಾಳ ಕ್ಷೇತ್ರದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಅನುಬಂಧ–1

ಎಲ್‌ಎಕ್ಯೂ ನಂ–413

ಘೋಷವಾರು (ವಿಜಾಪೂರ ವಿಭಾಗದ ಕಾಮಗಾರಿಗಳು)

ಅ. ನಂ.	ವರ್ಷ	ಒಟ್ಟು ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ವೆಚ್ಚ	ಪರಾ
1	2008–09	542	8275.89	6759.24	3799.53	
2	2009–10	268	11240.19	6763.39	5952.04	
3	2010–11	393	15658.84	6255.08	8355.70	
	Total	**1203**	**35174.92**	**19777.71**	**18107.27**	

ಘೋಷವಾರು 2008–09 (ವಿಜಾಪೂರ ವಿಭಾಗದ ಕಾಮಗಾರಿಗಳು)

ಅ. ಸಂ.	ಲೆಕ್ಕ ಶೀರ್ಷಿಕೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ವೆಚ್ಚ	ಷರಾ
1	5054 ನಬಾರ್ಡ	70	5069.02	5069.02	3125.70	ಕಾಮಗಾರಿಗಳು ಮುಗಿದಿವೆ
2	5054 ಅಪೆಂಡಿಕ್ಸ್ 'ಇ'	54	2257.21	740.56	229.37	ಕಾಮಗಾರಿಗಳು ಮುಗಿದಿವೆ
3	3054 (12ನೇ ಹಣಕಾಸು)	378	716.40	716.40	394.57	ಕಾಮಗಾರಿಗಳು ಮುಗಿದಿವೆ
4	5054 (ಎಸ್‌ಸಿಎಸ್‌ಪಿ)	24	214.50	214.50	44.16	ಕಾಮಗಾರಿಗಳು ಮುಗಿದಿವೆ
5	5054 ಟಿಎಸ್‌ಪಿ	16	18.76	18.76	5.73	ಕಾಮಗಾರಿಗಳು ಮುಗಿದಿವೆ
	Total	**542**	**8275.89**	**6759.24**	**3799.53**	

ಘೋಷವಾರು 2009–10 (ವಿಜಾಪೂರ ವಿಭಾಗದ ಕಾಮಗಾರಿಗಳು)

ಅ. ಸಂ.	ಲೆಕ್ಕ ಶೀರ್ಷಿಕೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ವೆಚ್ಚ	ಷರಾ
1	5054 ನಬಾರ್ಡ	79	5848.72	3063.20	3663.14	ಕಾಮಗಾರಿಗಳು ಮುಗಿದಿವೆ
2	5054, ಸಿಆರ್ಎಫ್	2	240.00	240.00	0.00	ಕಾಮಗಾರಿಗಳು ಮುಗಿದಿವೆ
3	5054 ಅಪೆಂಡಿಕ್ಸ್ 'ಇ'	54	2330.81	639.53	943.43	ಕಾಮಗಾರಿಗಳು ಮುಗಿದಿವೆ
4	5054 ಡಾ. ನಂಜುಂಡಪ್ಪ	48	1563.10	1563.10	773.54	ಕಾಮಗಾರಿಗಳು ಮುಗಿದಿವೆ
5	5054 ಎಸ್ಸಿಎಸ್ಪಿ	45	405.94	405.94	215.77	ಕಾಮಗಾರಿಗಳು ಮುಗಿದಿವೆ
6	5054 ಟಿಎಸ್ಪಿ	25	18.36	18.36	9.92	ಕಾಮಗಾರಿಗಳು ಮುಗಿದಿವೆ
7	5054 ಸುವರ್ಣ ರಸ್ತೆ	15	833.26	833.26	346.24	ಕಾಮಗಾರಿಗಳು ಮುಗಿದಿವೆ
	Total	**268**	**11240.19**	**6763.39**	**5952.04**	

ಘೋಷವಾರು 2010–11 (ವಿಜಾಪೂರ ವಿಭಾಗದ ಕಾಮಗಾರಿಗಳು)

ಅ. ನಂ.	ಲೆಕ್ಕ ಶೀರ್ಷಿಕೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ವೆಚ್ಚ	ಷರಾ
1	5054 ನಬಾರ್ಡ್	87	6424.62	1089.97	4622.58	ಕಾಮಗಾರಿಗಳು ಮುಗಿದಿವೆ
2	5054, ಅಪೆಂಡಿಕ್ಸ್ 'ಇ'	91	5039.00	1679.66	1576.82	ಕಾಮಗಾರಿಗಳು ಮುಗಿದಿವೆ
3	5054 ಸುವರ್ಣ ರಸ್ತೆ	27	1419.53	709.76	555.61	ಕಾಮಗಾರಿಗಳು ಮುಗಿದಿವೆ
4	5054 ರಾಜ್ಯ ಹೆದ್ದಾರಿ ನವೀಕರಣ	18	490.50	490.50	199.85	ಕಾಮಗಾರಿಗಳು ಮುಗಿದಿವೆ
5	5054 ಡಾ. ನಂಜುಂಡಪ್ಪ	51	1393.21	1393.21	675.75	ಕಾಮಗಾರಿಗಳು ಮುಗಿದಿವೆ
6	5054 ಎಸ್‌ಸಿಎಸ್‌ಪಿ	89	601.79	601.79	558.63	ಕಾಮಗಾರಿಗಳು ಮುಗಿದಿವೆ
7	5054 ಟಿಎಸ್‌ಪಿ	28	50.19	50.19	29.52	ಕಾಮಗಾರಿಗಳು ಮುಗಿದಿವೆ

8	5054 ಸಿಆರ್‌ಎಫ್	2	240.00	240.00	136.94	ಕಾಮಗಾರಿಗಳು ಮುಗಿದಿವೆ
	Total	**393**	**15658.84**	**6255.08**	**8355.70**	

ಅನುಬಂಧ–2

ಎಲ್‌ಎಕ್ಯೂ ನಂ–413

ಘೋಷವಾರು (ಮುದ್ದೆಬಿಹಾಳ ಮತಕ್ಷೇತ್ರ)

ಅ. ನಂ.	ವರ್ಷ	ಒಟ್ಟು ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ವೆಚ್ಚ	ಪುರಾ
1	2008–09	73	893.05	788.05	596.63	
2	2009–10	35	1256.40	546.87	684.55	
3	2010–11	52	1626.42	617.40	974.96	
	Total	**160**	**3775.87**	**1952.32**	**2256.14**	

ಘೋಷವಾರು 2008–09 (ಮುದ್ದೆಬಿಹಾಳ ಮತಕ್ಷೇತ್ರ) (ಮುದ್ದೆಬಿಹಾಳ ಮತಕ್ಷೇತ್ರ)

ಅ. ಸಂ.	ಲೆಕ್ಕ ಶೀರ್ಷಿಕೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ವೆಚ್ಚ	ಷರಾ
1	5054 ನಬಾರ್ಡ–10	1	180.00	180.00	138.32	ಕಾಮಗಾರಿಗಳು ಮುಗಿದಿವೆ
2	5054 ನಬಾರ್ಡ–11 (ಭಾಗ–2)	2	152.00	152.00	160.06	ಕಾಮಗಾರಿಗಳು ಮುಗಿದಿವೆ
3	5054 ನಬಾರ್ಡ–12	2	117.50	117.50	144.74	ಕಾಮಗಾರಿಗಳು ಮುಗಿದಿವೆ
4	5054 ನಬಾರ್ಡ–13	3	170.00	170.00	55.48	ಕಾಮಗಾರಿಗಳು ಮುಗಿದಿವೆ
5	5054 ಅಪೆಂಡಿಕ್ಸ್ 'ಇ'	1	100.00	30.00	–	ಕಾಮಗಾರಿಗಳು ಮುಗಿದಿವೆ
6	5054 ಹೆಚ್ಚುವರಿ	4	50.00	15.00	–	ಕಾಮಗಾರಿಗಳು ಮುಗಿದಿವೆ
7	3054 (12ನೇ ಹಣಕಾಸು)	52	89.90	89.90	87.26	ಕಾಮಗಾರಿಗಳು ಮುಗಿದಿವೆ

8	5054 ಎಸ್‌ಸಿಎಸ್‌ಪಿ	4	28.50	28.50	8.68	ಕಾಮಗಾರಿಗಳು ಮುಗಿದಿವೆ
9	5054 ಟಿಎಸ್‌ಪಿ	4	5.15	5.15	2.09	ಕಾಮಗಾರಿಗಳು ಮುಗಿದಿವೆ
	Total	**73**	**893.05**	**788.05**	**596.63**	

ಘೋಷವಾರು 2009–10 (ಮುದ್ದೆಬಿಹಾಳ ಮತಕ್ಷೇತ್ರ)

ಅ. ನಂ.	ಲೆಕ್ಕ ಶೀರ್ಷಿಕೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ವೆಚ್ಚ	ಷರಾ
1	5054 ನಬಾರ್ಡ–10	1	180.00	36.00	138.32	ಕಾಮಗಾರಿಗಳು ಮುಗಿದಿವೆ
2	5054 ನಬಾರ್ಡ–11 (ಭಾಗ–2)	2	152.00	30.00	166.68	ಕಾಮಗಾರಿಗಳು ಮುಗಿದಿವೆ
3	5054 ನಬಾರ್ಡ–12	2	117.50	23.50	144.74	ಕಾಮಗಾರಿಗಳು ಮುಗಿದಿವೆ
4	5054 ನಬಾರ್ಡ–13	3	11.50	2.30	90.48	ಕಾಮಗಾರಿಗಳು ಮುಗಿದಿವೆ

5	5054 ನಬಾರ್ಡ–14	1	95.50	19.10	32.63	ಕಾಮಗಾರಿಗಳು ಮುಗಿದಿವೆ
6	5054 ನಬಾರ್ಡ–15	1	80.70	16.14	0.00	ಕಾಮಗಾರಿಗಳು ಮುಗಿದಿವೆ
7	5054 ಅಪೆಂಡಿಕ್ಸ್ 'ಇ'	6	190.00	58.85	0.00	ಕಾಮಗಾರಿಗಳು ಮುಗಿದಿವೆ
8	5054 ಹೆಚ್ಚುವರಿ	12	276.89	276.89	111.70	ಕಾಮಗಾರಿಗಳು ಮುಗಿದಿವೆ
9	5054 ಎಸ್‌ಸಿಎಸ್‌ಪಿ	4	45.65	45.65	0.00	ಕಾಮಗಾರಿಗಳು ಮುಗಿದಿವೆ
10	5054 ಟಿಎಸ್‌ಪಿ	2	5.49	5.44	0.00	ಕಾಮಗಾರಿಗಳು ಮುಗಿದಿವೆ
11	ಸುವರ್ಣ ರಸ್ತೆ	1	101.17	33.00	0.00	ಕಾಮಗಾರಿಗಳು ಮುಗಿದಿವೆ
	Total	**35**	**1256.40**	**546.87**	**684.55**	

ಘೋಷವಾರು 2010–11 (ಮುದ್ದೆಬಿಹಾಳ ಮತಕ್ಷೇತ್ರ)

ಅ. ನಂ.	ಲೆಕ್ಕ ಶೀರ್ಷಿಕೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ವೆಚ್ಚ	ಪರಾ
1	5054 ನಬಾರ್ಡ–10	1	188.00	37.00	138.32	ಕಾಮಗಾರಿಗಳು ಮುಗಿದಿವೆ
2	5054 ನಬಾರ್ಡ–11 (ಭಾಗ–1)	0	0.00	0.00	0.00	ಕಾಮಗಾರಿಗಳು ಮುಗಿದಿವೆ
3	5054 ನಬಾರ್ಡ–11 (ಭಾಗ–2)	2	152.00	30.00	166.68	ಕಾಮಗಾರಿಗಳು ಮುಗಿದಿವೆ
4	5054 ನಬಾರ್ಡ–12	2	117.50	23.50	144.74	ಕಾಮಗಾರಿಗಳು ಮುಗಿದಿವೆ
5	5054 ನಬಾರ್ಡ–13	3	170.00	34.00	91.06	ಕಾಮಗಾರಿಗಳು ಮುಗಿದಿವೆ
6	5054 ನಬಾರ್ಡ–14	1	95.50	19.00	95.75	ಕಾಮಗಾರಿಗಳು ಮುಗಿದಿವೆ

7	5054 ನಬಾರ್ಡ–15	1	80.70	16.00	20.86	ಕಾಮಗಾರಿಗಳು ಮುಗಿದಿವೆ
8	5054 ಅಪೆಂಡಿಕ್ಸ್ 'ಇ'	11	307.00	100.00	106.49	ಕಾಮಗಾರಿಗಳು ಮುಗಿದಿವೆ
9	ಸುವರ್ಣ ರಸ್ತೆ	2	182.28	90.00	101.26	ಕಾಮಗಾರಿಗಳು ಮುಗಿದಿವೆ
10	5054 ಎಸ್ಎಚ್ ರಿನಿವಲ್	3	95.54	30.00	0.14	ಕಾಮಗಾರಿಗಳು ಮುಗಿದಿವೆ
11	ಡಾ. ನಂಜುಂಡಪ್ಪ	6	156.50	156.50	28.64	ಕಾಮಗಾರಿಗಳು ಮುಗಿದಿವೆ
	5054 ಎಸ್ಸಿಎಸ್ಪಿ	15	70.84	70.84	76.92	ಕಾಮಗಾರಿಗಳು ಮುಗಿದಿವೆ
12	5054 ಟಿಎಸ್ಪಿ	5	10.56	10.56	4.10	ಕಾಮಗಾರಿಗಳು ಮುಗಿದಿವೆ
	Total	**52**	**1626.42**	**617.40**	**974.96**	

ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರದಲ್ಲಿ 2008 ರಿಂದ ಹಿಡಿದು 2010–11 ರವರೆಗೂ ಮಾಹಿತಿಯನ್ನು ಕೊಟ್ಟಿದ್ದಾರೆ. 2011–12ರ ಮಾಹಿತಿ ನಮಗೆ ಲಭ್ಯವಾಗಿಲ್ಲ. ತಾವು ಕೊಟ್ಟಿರುವಂತಹ ಉತ್ತರದಲ್ಲಿ Appendix-E ನಲ್ಲಿ ತೆಗೆದುಕೊಂಡ ಕಾಮಗಾರಿಗಳು ಎಂದು ನೋಡಿದಾಗ ವೆಚ್ಚ ಎಷ್ಟಾಗಿದೆ ಎಂದು 2–3 ವರ್ಷದ್ದು ನೋಡಿದರೆ ಶೂನ್ಯ ಇದೆ. The Progress is zero. ತಾವು ರಸ್ತೆಗಳ ಅಭಿವೃದ್ಧಿಗೋಸ್ಕರ ಪಟ್ಟಿ ಏನು ಕೊಟ್ಟಿದ್ದೀರಿ, ಈ ಪಟ್ಟಿಯನ್ನು ಬೇರೆ ಕಡೆ ಹೋಲಿಸಿ ನೋಡಿದಾಗ ನಬಾರ್ಡ್ ಬಿಟ್ಟರೆ ಇದು regular kilometer-wise 3054, 5054ಗೆ maintenanceಗೆ ಕೊಡುವಂಥಾದ್ದು ಆಗಿದೆ. ಇದರಲ್ಲಿ ವಿಶೇಷವಾದಂಥಾದ್ದಿಲ್ಲ. ಈ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಅವುಗಳನ್ನು ಸುಧಾರಣೆ ಮಾಡುವುದಕ್ಕೆ ಇವತ್ತಿನವರೆಗೂ ಏನೂ ಕ್ರಮಗಳನ್ನು ಕೈಗೊಂಡಿಲ್ಲ. ಇದರ ಬಗ್ಗೆ ತಾವು ಉತ್ತರವನ್ನು ಕೊಡಬೇಕು. ಈಗಾಗಲೇ ತಮಗೆ ನಿಯೋಗ ಕೂಡ ಭೇಟಿಯಾಗಿದೆ. ಮುದ್ದೇಬಿಹಾಳ ತಾಲ್ಲೂಕಿನಲ್ಲಿ ರಸ್ತೆಗಳು ಎಷ್ಟು ಹದಗೆಟ್ಟಿವೆ ಎಂದು ತಮಗೆ ಗೊತ್ತಿದೆ. ಅದರ ಬಗ್ಗೆ ಪ್ರತಿವರ್ಷ ಒಂದೆರಡು ಬಾರಿ ಪಕ್ಷಾತೀತವಾಗಿ ಜನರು ಸತ್ಯಾಗ್ರಹಗಳನ್ನು ಮಾಡುತ್ತಿದ್ದಾರೆ. ತಮಗೂ ಕೂಡ ಬಂದು ಭೇಟಿಯಾಗಿದ್ದಾರೆ. ತಾವು ಏನು ಕ್ರಮವನ್ನು ಕೈಗೊಂಡಿದ್ದೀರಿ? ನಮಗೆ ಈ ವರ್ಷ ಎಷ್ಟು ಹಣವನ್ನು ನೀಡುತ್ತೀರಿ? ಯಾವ್ಯಾವ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ತಾವು ಈ ರಸ್ತೆ ಸುಧಾರಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಿ ಎಂದು ಹೇಳಬೇಕು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ವಿವರವನ್ನು ಕೊಟ್ಟು ಅನುಬಂಧದಲ್ಲಿ ಮಾಹಿತಿಯನ್ನು ತಮಗೆ ಕೊಟ್ಟಿದ್ದೇವೆ. ಅನುಬಂಧದಲ್ಲಿ ಕೊಟ್ಟಿರುವ ಮಾಹಿತಿಯನ್ನು ತಾವು maintenance ಎಂದು ಹೇಳುತ್ತಿದ್ದೀರಿ. ವಿವರವನ್ನು ಅನುಬಂಧದಲ್ಲಿ ಕೊಟ್ಟಿರುವಂತಹ ಘೋಷವಾರು ಮಾಹಿತಿಯಲ್ಲಿ ತಾವು ನೋಡಬಹುದು. Appendix-E ನಲ್ಲಿ 12ನೇ ಹಣಕಾಸಿನಲ್ಲಿ SCP/TSP ನಲ್ಲಿ ಕೊಡುವುದಲ್ಲದೆ ನಬಾರ್ಡ್‌ನವರು ಕೊಡುವಂತಹ ವಿವರ ಸೇರಿದಂತೆ ನಾವು ಕೊಟ್ಟಿರುವಂತಹ ಮಾಹಿತಿಯನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಸಿಎಸ್. ನಾಡಗೌಡ : SCP/TSP ತಾವು ಕೇರಿಗಳಲ್ಲಿ ಕೊಟ್ಟಿದ್ದೀರಿ, ಆ ಮಾತು ಬೇರೆ. ಇಲ್ಲಿ ನಾನು ಮುಖ್ಯ ರಸ್ತೆಗಳ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಸಿಎಂ. ಉದಾಸಿ : ಅಪೆಂಡಿಕ್ಸ್‌ನಲ್ಲಿ ಮಾಹಿತಿ ಇದೆ. ನೀವು maintenance ಬಗ್ಗೆ ಅಷ್ಟೇ ಕೊಟ್ಟಿದ್ದೀರಿ ಎಂದು ಹೇಳುತ್ತಿದ್ದೀರಿ, ಅದಕ್ಕೆ ಹೇಳಿದೆ.

ಶ್ರೀ ಸಿಎಸ್. ನಾಡಗೌಡ : ಇದೆ, ನಾನು SCP/TSP ಗೆ ಒತ್ತು ನೀಡುತ್ತಿಲ್ಲ. ನನ್ನ ಪ್ರಶ್ನೆ ಮುಖ್ಯ ರಸ್ತೆಗಳ ಬಗ್ಗೆ ಕೇಳುತ್ತಿದ್ದೇನೆ. ಮುಖ್ಯ ರಸ್ತೆಗಳು ಯಾವ ಮಟ್ಟಕ್ಕೆ ಇವೆ ಎಂದರೆ ನಾವು ಓಡಾಡುವುದಕ್ಕೆ ಆಗುವುದಿಲ್ಲ. ಈ ಮಾಹಿತಿಯನ್ನು ತೆಗೆದುಕೊಂಡು ನಾಳೆ ದಿವಸ ಇವರು ಒಂದು enquiry ಮಾಡಿಸಲಿ. ಈ ವೆಚ್ಚ ಸರಿಯಾಗಿ ಆಗಿದೆಯೇ? ಸಮರ್ಪಕವಾಗಿ ಕೆಲಸಗಳಾಗಿದೆಯೇ ಎಂದು departmental enquiry ಆಗಲಿ. ಏಕೆಂದರೆ ಇದೆಲ್ಲಾ ಕಾಗದದಲ್ಲಿ ಇದೆ. ರಸ್ತೆಗಳು ಆಗಿರುವುದು ನಮ್ಮ ಕಣ್ಣಿಗೆ ಕಾಣುತ್ತಿಲ್ಲ. ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ರಸ್ತೆಗಳಿವೆ.

ಶ್ರೀ ಸಿಎಂ. ಉದಾಸಿ : ಈಗ ತಪ್ಪು ಮಾಹಿತಿ ಹೋಗುವುದು ಬೇಡ. Appendix-E ನಲ್ಲಿ 2011–12ನೇ ಸಾಲಿನಲ್ಲಿ 74 ಕಿಲೋಮೀಟರ್‌ಗೆ ಏಳು ಕೋಟಿ ರೂಪಾಯಿಗಳಷ್ಟು, ಹತ್ತು ರಸ್ತೆಗಳಿಗೆ ಮತ್ತು ಎರಡು ಸೇತುವೆ ಕಾಮಗಾರಿಗಳಿಗೆ ಟೆಂಡರ್ ಕರೆದು ಪ್ರಕ್ರಿಯೆ ಪ್ರಾರಂಭವಾಗಿದೆ.

ಶ್ರೀ ಸಿಎಸ್. ನಾಡಗೌಡ : ನನಗೆ ಬಂದಂತಹ ಮಾಹಿತಿಯಲ್ಲಿ ತಾವು 2011–12ನೇ ಸಾಲಿನ ಮಾಹಿತಿ ಕೊಟ್ಟಿಲ್ಲ.

ಶ್ರೀ ಸಿಎಂ. ಉದಾಸಿ : ನಾನು ಕೊಟ್ಟಿದ್ದೇನೆ. ಅದರ ಒಂದು ಕಾಪಿ ಕೊಟ್ಟು ಕಳುಹಿಸುತ್ತಿದ್ದೇನೆ.

ಶ್ರೀ ಸಿಎಸ್. ನಾಡಗೌಡ : ನನ್ನ ಉತ್ತರದಲ್ಲಿ ಬಂದಿಲ್ಲ.

ಶ್ರೀ ಸಿ.ಎಂ. ಉದಾಸಿ : ಇದರ ಜೊತೆಗೆ ನೀವು ಬಂದು ನನ್ನ ಹತ್ತಿರ ಚರ್ಚೆ ಮಾಡಿದಾಗ ಕೃಷ್ಣಾ ಜಲ ಭಾಗ್ಯ ನಿಗಮ ಆಲಮಟ್ಟಿಗೆ ಸಂಬಂಧಿಸಿದ ರಸ್ತೆಗಳನ್ನು ಸೇರಿಸಿ 96 ಲಕ್ಷ ರೂಪಾಯಿ ಮುದ್ದೇಬಿಹಾಳ – ನಾರಾಯಣಪುರ ರಸ್ತೆಗೆ, ಆಲಮಟ್ಟಿ– ಮುದ್ದೇಬಿಹಾಳ 96 ಲಕ್ಷ ರೂಪಾಯಿ, ಮುದ್ದೇಬಿಹಾಳ – ತಂಗಡಗಿಗೆ 95 ಲಕ್ಷ ರೂಪಾಯಿಯ ಕಾಮಗಾರಿ ಪ್ರಗತಿಯಲ್ಲಿದ್ದು, ಶಿರಾಳ ರೋಡ್‌ನಿಂದ ಲಿಂಗಸುಗೂರುವರೆಗೆ 11,42,000 ರೂಪಾಯಿಗೆ ಮತ್ತು ಆಲಮಟ್ಟಿಯಿಂದ–ಮುದ್ದೇಬಿಹಾಳ ರಸ್ತೆಗೆ 10 ಲಕ್ಷ ರೂಪಾಯಿ ಎಂದು ತಮ್ಮ ಎದುರುಗಡೆ ಮಾಹಿತಿ ಇದೆ. ತಮಗೆ ಮಾಹಿತಿ ಬೇಕಾದರೆ ನಾನು ಕಳುಹಿಸಿ ಕೊಡುತ್ತೇನೆ. ನಾವು ಮಾಹಿತಿ ಕೊಟ್ಟಿರುವ ಪ್ರಕಾರ ನೀವು ಕೆಲಸ ಆಗಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೀರಿ. ತಾವು ವಿಚಾರಣೆ ಮಾಡಿಸಬೇಕೆಂದರೆ ನನ್ನದೇನೂ ಆಕ್ಷೇಪಣೆ ಇಲ್ಲ.

ಶ್ರೀ ಸಿ.ಎಸ್. ನಾಡಗೌಡ : I am demanding enquiry very sincerely. ಏಕೆಂದರೆ ತಾವು ಈ ಮಾಹಿತಿಯನ್ನು ಕೊಟ್ಟಿರುವುದನ್ನು ನೋಡಿದಾಗ ಹಾಗೂ ಅಲ್ಲಿ ನಿಜವಾಗಿ ರಸ್ತೆಗಳ ಪರಿಸ್ಥಿತಿಯನ್ನು ನೋಡಿದಾಗ ಹಣ ಎಲ್ಲಿಗೆ ಹೋಯಿತು? ಎಷ್ಟು ಖರ್ಚಾಗುತ್ತಿದೆ? ನಿಮ್ಮ estimates ಏನಿದೆ ಕೊನೇಪಕ್ಷ ಆ ಪ್ರಕಾರವಾಗಿ ಕೆಲಸಗಳಾಗಬೇಕು, ಏಕೆ ಆಗಿಲ್ಲ?

ಶ್ರೀ ಸಿ.ಎಂ. ಉದಾಸಿ : ನನ್ನ ಹತ್ತಿರ ಬರುವಂತಹ ಮಾಹಿತಿಯನ್ನು ತಮಗೆ ಕೊಟ್ಟಿದ್ದೇನೆ. ಇದರ ಬಗ್ಗೆ ಅನುಮಾನಗಳು ಇವೆ, ವಿಚಾರಣೆ ಮಾಡಿಸಬೇಕೆಂದು ಹೇಳಿದರೆ ನನ್ನದೇನೂ ಆಕ್ಷೇಪಣೆ ಇಲ್ಲ. ಇದರ ಜೊತೆಗೆ 1999 ರಿಂದ 2004 ರವರೆಗೆ ಆಗಿರುವಂತಹ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ನೀವು ಹೋಲಿಕೆ ಮಾಡಿಕೊಂಡು ನೋಡಿ ನನಗೆ ಉತ್ತರ ನೀಡಿದರೆ ಚೆನ್ನಾಗಿರುತ್ತದೆಂದು ಹೇಳುತ್ತಾ, ನಿಮಗೆ ಮಾಹಿತಿಯನ್ನು ಕಳುಹಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ : Enquiry ಕೂಡ ಮಾಡಿಸಲಿ. 2011–12ನೇ ಸಾಲಿಗೆ ಸಂಬಂಧಪಟ್ಟಂತೆ ತಾವೇನು ಉತ್ತರ ನೀಡಿದ್ದೀರಿ, ಅದರ ಮಾಹಿತಿ ನನ್ನ ಹತ್ತಿರ ಇಲ್ಲ. ದಯವಿಟ್ಟು ತಾವು ಅದರ ಮಾಹಿತಿಯನ್ನು ಕಳುಹಿಸಿಕೊಡಿ. ಅದು ರೆಕಾರ್ಡ್‌ಗೆ ಹೋಗಬೇಕಾಗುತ್ತದೆ. ತಾವು

ಉತ್ತರವನ್ನು ರೆಕಾರ್ಡ್‌ಗೂ ಕೂಡ ಕಳುಹಿಸಬೇಕು. ಏಕೆಂದರೆ department ನಿಂದ ಬಂದಂತಹ ಉತ್ತರದಲ್ಲಿ ಇಲ್ಲ.

ಶ್ರೀ ಸಿ.ಎಂ. ಉದಾಸಿ : ಕಳುಹಿಸಿಕೊಡುತ್ತೇನೆ.

ಆಯವ್ಯಯದಲ್ಲಿ ಘೋಷಿಸಲಾದ ಹೊಸ ಯೋಜನೆಗಳು

64 (395) ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅನುಷ್ಠಾನಗೊಳಿಸಲು ಆಯವ್ಯಯದಲ್ಲಿ ಘೋಷಿಸಲಾದ ಹೊಸ ಯೋಜನೆಗಳು ಯಾವುವು; ಆಯವ್ಯಯದಲ್ಲಿ ಈ ಯೋಜನೆಗಳಿಗೆ ಒದಗಿಸಲು ಉದ್ದೇಶಿಸಿದ ಹಣವೆಷ್ಟು? ಬಿಡುಗಡೆಯಾದ ಹಣವೆಷ್ಟು?

ಆ) ಇದರಿಂದ ಎಷ್ಟು ಜನರಿಗೆ ಪ್ರಯೋಜನವಾಗಿದೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಅನುಬಂಧ–1 ಲಗತ್ತಿಸಿದೆ.

ಆ) ಅನುಬಂಧ–2 ಲಗತ್ತಿಸಿದೆ.